All India Radio: Bangalore
National Bulletin In Kannada
13.01.2026 07.35 a.m.
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
13.01.2026 07.35 a.m.
<><><><>

ಮುಖ್ಯಾಂಶಗಳು

1. ಜಿಟಲ್ ಇಂಡಿಯಾ ನವೋದ್ಯಮ ಯುವ ಭಾಗವಹಿಸುವಿಕೆ ; ದೇಶದ ಭವಿಷ್ಯವನ್ನು ಪುನರ್ ರೂಪಿಸುತ್ತಿದೆ - ಪ್ರಧಾನಿ ನರೇಂದ್ರ ಮೋದಿ
2. ನೇರ ತೆರಿಗೆ ಸಂಗ್ರಹ ಸಕಾರಾತ್ಮಕ ಬೆಳವಣಿಗೆ ; ೧೮.೩೮ ಲಕ್ಷ ಕೋಟಿ ರೂಪಾಯಿಗಿಂತ ಅಧಿಕ ತೆರಿಗೆ ಸಂಗ್ರಹ
3. ಇರಾನ್ ಜೊತೆ ವಾಣಿಜ್ಯ ಸಂಬಂಧ ಇಟ್ಟುಕೊಂಡರೆ ಅಮೆರಿಕದಿಂದ ಆರ್ಥಿಕ ದಂಡ ಎದುರಿಸಬೇಕು - ಅಧ್ಯಕ್ಷ ಡೋನಾಲ್ಡ್ ಟ್ರಂಪ್
4. ಇಂಡಿಯಾ ಓಪನ್ ಬ್ಯಾಡ್ಮಿಂಟನ್-೨೦೨೬ ; ನವದೆಹಲಿಯಲ್ಲಿಂದು ಆರಂಭ

<><><><>

ಡಿಜಿಟಲ್ ಇಂಡಿಯಾ, ನವೋದ್ಯಮ ಬೆಳವಣಿಗೆ ಮತ್ತು ಯುವ ಭಾಗವಹಿಸುವಿಕೆಯ ಸಂಯೋಜನೆಯು, ದೇಶದ ಭವಿಷ್ಯವನ್ನು ಪುನರ್ ರೂಪಿಸುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ನವದೆಹಲಿಯಲ್ಲಿ ನಿನ್ನೆ ನಡೆದ ವಿಕಸಿತ ಭಾರತ- ಯುವ ನಾಯಕರ ಸಂವಾದ- ೨೦೨೬ ರ ಅಂತಿಮ ಅಧಿವೇಶನದಲ್ಲಿ ಮಾತನಾಡಿದ ಪ್ರಧಾನಿ, ಸೃಜನಶೀಲ ಮತ್ತು ತಂತ್ರಜ್ಞಾನ ಆಧಾರಿತ ವಲಯಗಳಲ್ಲಿ ದೇಶ, ತ್ವರಿತ ಬೆಳವಣಿಗೆಯನ್ನು ಕಾಣುತ್ತಿದೆ, ಇವು ಹೆಚ್ಚಾಗಿ ಯುವ ನಾವೀನ್ಯಕಾರರು ಮತ್ತು ಉದ್ಯಮಿಗಳಿಂದ ನಡೆಸಲ್ಪಡುತ್ತಿವೆ ಎಂದು ಹೇಳಿದರು. ಡಿಜಿಟಲ್ ಇಂಡಿಯಾ, ಉತ್ಪಾದಕರ ಸಂಪೂರ್ಣ ಹೊಸ ಸಮುದಾಯವನ್ನು ಸೃಷ್ಟಿಸಿದೆ ಮತ್ತು ಸಂಸ್ಕೃತಿ, ವಿಷಯ ಮತ್ತು ಸೃಜನಶೀಲತೆಯನ್ನು ಒಳಗೊಂಡ 'ಆರ್ಥಿಕತೆ'ಯ ಅಭೂತಪೂರ್ವ ಏರಿಕೆಗೆ ಪುಷ್ಟಿ ನೀಡುತ್ತಿದೆ ಎಂದು ಅವರು ಹೇಳಿದರು. ೨೦೪೭ ರಲ್ಲಿ ದೇಶ, ಸ್ವಾತಂತ್ರ್ಯದ ೧೦೦ ವರ್ಷಗಳನ್ನು ಪೂರ್ಣಗೊಳಿಸಿದಾಗ, ಅದು ಇಂದಿನ ಯುವಕರ ಜೀವನಕ್ಕೆ ಅತ್ಯಂತ ಪ್ರಮುಖ ಸಮಯವಾಗಿರುತ್ತದೆ, ಅವರ ಸಾಮರ್ಥ್ಯ, ಭಾರತದ ಸಾಮರ್ಥ್ಯವಾಗುತ್ತದೆ ಮತ್ತು ಅವರ

ಯಶಸ್ಸು, ಭಾರತದ ಯಶಸ್ಸನ್ನು ಹೊಸ ಎತ್ತರಕ್ಕೆ ಕೊಂಡೊಯ್ಯುತ್ತದೆ ಎಂದು ಪ್ರಧಾನಿ ನುಡಿದರು. ಯುವ ನಾಯಕರ ಸಂವಾದ, ಒಂದು ಐತಿಹಾಸಿಕ ಮತ್ತು ವಿಶಿಷ್ಟ ಉಪಕ್ರಮವಾಗಿದ್ದು, ಅಲ್ಪಾವಧಿಯಲ್ಲಿಯೇ ಇದು ಒಂದು ದೊಡ್ಡ ವೇದಿಕೆಯಾಗಿದೆ, ತನ್ನದೇ ಆದ ಚಿಂತಕರ ಚಾವಡಿಯಾಗಿದೆ ಎಂದು ಹೇಳಿದರು. ಭಾರತದ ಯುವ ಪೀಳಿಗೆ, ಸೃಜನಶೀಲತೆಯಿಂದ ತುಂಬಿದೆ ಎಂಬುದಕ್ಕೆ ಇದು ಸಾಕ್ಷಿಯಾಗಿದೆ ಎಂದ ಪ್ರಧಾನಿ, ಸ್ಟಾರ್ಟ್ಅಪ್ ಇಂಡಿಯಾ, ಡಿಜಿಟಲ್ ಇಂಡಿಯಾ, ವ್ಯವಹಾರವನ್ನು ಸುಲಭಗೊಳಿಸುವುದು ಮತ್ತು ತೆರಿಗೆ ಹಾಗೂ ಅನುಸರಣೆಯ ಸರಳೀಕರಣದಂತಹ ಪ್ರಮುಖ ಸುಧಾರಣೆಗಳು ಮತ್ತು ಉಪಕ್ರಮಗಳನ್ನು ಪ್ರಧಾನಿ ಉಲ್ಲೇಖಿಸಿದರು, ದೇಶದಲ್ಲಿ ಪ್ರಸ್ತುತ ಸಾವಿರಕ್ಕೂ ಹೆಚ್ಚು ರಕ್ಷಣಾ ಸ್ಟಾರ್ಟ್ಅಪ್‌ಗಳು ಕಾರ್ಯನಿರ್ವಹಿಸುತ್ತಿವೆ, ಡ್ರೋನ್‌ಗಳು, ಡ್ರೋನ್ ವಿರೋಧಿ ವ್ಯವಸ್ಥೆಗಳು, ಎಐ ಆಧಾರಿತ ಕ್ಯಾಮೆರಾಗಳು ಮತ್ತು ರೊಬೊಟಿಕ್ಸ್ ಸೇರಿದಂತೆ, ವ್ಯಾಪಕ ಶ್ರೇಣಿಯ ತಂತ್ರಜ್ಞಾನಗಳಲ್ಲಿ ಯುವ ಉದ್ಯಮಿಗಳು, ಕೆಲಸ ಮಾಡುತ್ತಿದ್ದಾರೆ, ಇದು ಭಾರತದ ವಿಸ್ತರಿಸುತ್ತಿರುವ ನಾವೀನ್ಯತೆ ಪರಿಸರ ವ್ಯವಸ್ಥೆಯನ್ನು ಪ್ರತಿಬಿಂಬಿಸುತ್ತದೆ ಎಂದು ಅವರು ಹೇಳಿದರು.

ಭಾರತದ ಬಾಹ್ಯಾಕಾಶ ಕ್ಷೇತ್ರದ ಬಗ್ಗೆಯೂ ಪ್ರಸ್ತಾಪಿಸಿದ ಪ್ರಧಾನಿ, ಐದರಿಂದ ಆರು ವರ್ಷಗಳ ಹಿಂದೆ, ಬಾಹ್ಯಾಕಾಶ ವಲಯವನ್ನು ಅಭಿವೃದ್ಧಿಪಡಿಸುವ ಜವಾಬ್ದಾರಿ ಇಸ್ರೋದ ಮೇಲಿತ್ತು, ಸರ್ಕಾರ, ಬಾಹ್ಯಾಕಾಶ ವಲಯವನ್ನು ಖಾಸಗಿ ಉದ್ಯಮಗಳಿಗೆ ಮುಕ್ತಗೊಳಿಸಿತು, ನೀತಿಗಳನ್ನು ವಿಸ್ತರಿಸಿತು ಮತ್ತು ಪೋಷಕ ಸಂಸ್ಥೆಗಳನ್ನು ರಚಿಸಿತು ಎಂದು ಹೇಳಿದರು. ಸ್ವಾಮಿ ವಿವೇಕಾನಂದರ ಜೀವನ ಎಲ್ಲರಿಗೂ ಉತ್ತಮ ಮಾರ್ಗದರ್ಶಕ ಬೆಳಕು ಎಂದು ಪ್ರಧಾನಿ ಹೇಳಿದರು. ಜನವರಿ ೯ ರಿಂದ ೧೨ ರವರೆಗೆ ನಡೆದ ವಿಕಸಿತ ಭಾರತ, ಯುವ ನಾಯಕರ ಸಂವಾದದಲಿ,  ದೇಶಾದ್ಯಂತ, ವಿವಿಧ ಹಂತಗಳಲ್ಲಿ ೫೦ ಲಕ್ಷಕ್ಕೂ ಹೆಚ್ಚು ಯುವಕರು ಭಾಗವಹಿಸಿದ್ದರು.

<><><><>

ಪ್ರಸಕ್ತ ಹಣಕಾಸು ವರ್ಷದಲ್ಲಿ ಜನವರಿ ಮಧ್ಯದವರೆಗೆ ಭಾರತದ ನಿವ್ವಳ ನೇರ ತೆರಿಗೆ ಸಂಗ್ರಹವು ಆರೋಗ್ಯಕರ ಬೆಳವಣಿಗೆಯನ್ನು ದಾಖಲಿಸಿದೆ. ಆದಾಯ ತೆರಿಗೆ ಇಲಾಖೆಯ ಪ್ರಕಾರ, ಈ ತಿಂಗಳ ೧೧ ರವರೆಗೆ ಸಂಗ್ರಹವು ಶೇಕಡ ೮.೮೨ ರಷ್ಟು ಹೆಚ್ಚಾಗಿ ೧೮.೩೮ ಲಕ್ಷ ಕೋಟಿ ರೂಪಾಯಿಗಳಿಗಿಂತ ಹೆಚ್ಚಾಗಿದೆ. ೮.೬೩ ಲಕ್ಷ ಕೋಟಿ ರೂಪಾಯಿಗಳ ಸ್ಥಿರ ಕಾರ್ಪೊರೇಟ್ ತೆರಿಗೆ

ಸ್ವೀಕೃತಿಗಳು ಮತ್ತು ವೈಯಕ್ತಿಕ ತೆರಿಗೆದಾರರ ಕೊಡುಗೆಗಳು ಈ ಹೆಚ್ಚಳಕ್ಕೆ ಕಾರಣವಾಗಿವೆ. ಸೆಕ್ಯುರಿಟೀಸ್ ವಹಿವಾಟು ತೆರಿಗೆಯಿಂದ ಸಂಗ್ರಹಗಳು ಬಂಡವಾಳ ಮಾರುಕಟ್ಟೆಗಳಲ್ಲಿ ನಿರಂತರ ಚಟುವಟಿಕೆಯನ್ನು ಸೂಚಿಸುತ್ತವೆ. ಅದೇ ಅವಧಿಯಲ್ಲಿ, ತೆರಿಗೆ ಮರುಪಾವತಿಗಳು ವರ್ಷದಿಂದ ವರ್ಷಕ್ಕೆ ಶೇಕಡ ೧೭ ರಷ್ಟು ಕಡಿಮೆಯಾಗಿರುವುದು ನಿವ್ವಳ ಸಂಗ್ರಹದಲ್ಲಿ ಹೆಚ್ಚಳಕ್ಕೆ ಬೆಂಬಲ ನೀಡುತ್ತದೆ. ಒಟ್ಟಾರೆಯಾಗಿ, ಈ ಹಣಕಾಸು ವರ್ಷದಲ್ಲಿ ಇಲ್ಲಿಯವರೆಗೆ ಒಟ್ಟು ನೇರ ತೆರಿಗೆ ಶೇಕಡ ೪.೧೪ ರಷ್ಟು ಹೆಚ್ಚಾಗಿದ್ದು, ಇದು ಸಕಾರಾತ್ಮಕ ಬೆಳವಣಿಗೆಯನ್ನು ತೋರಿಸುತ್ತಿದೆ. ೨೦೨೫-೨೬ ಹಣಕಾಸು ವರ್ಷದಲ್ಲಿ, ಸರ್ಕಾರವು ಹಿಂದಿನ ವರ್ಷಕ್ಕಿಂತ ಶೇಕಡ ೧೨.೭ ರಷ್ಟು ನೇರ ತೆರಿಗೆ ಸಂಗ್ರಹದಲ್ಲಿ ಬೆಳವಣಿಗೆ ನಿರೀಕ್ಷಿಸಿದೆ. ೨೦೨೬ರ ಹಣಕಾಸು ವರ್ಷದಲ್ಲಿ ಸೆಕ್ಯುರಿಟೀಸ್ ವಹಿವಾಟು ತೆರಿಗೆಯಿಂದ ೭೮ ಸಾವಿರ ಕೋಟಿ ರೂಪಾಯಿಗಳ ಗುರಿಯನ್ನು ಸರ್ಕಾರ ಹೊಂದಿದೆ.

<><><><>

ಇರಾನ್ ಜೊತೆ ವಾಣಿಜ್ಯ ಸಂಬಂಧ ಕಾಯ್ದುಕೊಳ್ಳುವ ದೇಶಗಳು ವಾಷಿಂಗ್ಟನ್ ನಿಂದ ಆರ್ಥಿಕ ದಂಡವನ್ನು ಎದುರಿಸಬೇಕಾಗುತ್ತದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಘೋಷಿಸಿದ್ದಾರೆ. ಇರಾನ್ ಇಸ್ಲಾಮಿಕ್ ರಿಪಬ್ಲಿಕ್ ಜೊತೆ ವ್ಯವಹಾರ ನಡೆಸುವ ಯಾವುದೇ ರಾಷ್ಟ್ರವು ಅಮೆರಿಕದೊಂದಿಗೆ ನಡೆಸುವ ಎಲ್ಲಾ ವ್ಯಾಪಾರದ ಮೇಲೆ ೨೫ ಪ್ರತಿಶತದಷ್ಟು ಸುಂಕಕ್ಕೆ ಒಳಪಟ್ಟಿರುತ್ತದೆ, ಇದು ತಕ್ಷಣವೇ ಜಾರಿಗೆ ಬರುತ್ತದೆ ಎಂದು ಟ್ರಂಪ್ ಇಂದು ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಹೇಳಿದ್ದಾರೆ. ಈ ವೇಳೆ ಅವರು, ಇರಾನ್ ಜೊತೆ ವ್ಯವಹರಿಸುವಾಗ ಮಿಲಿಟರಿ ಕ್ರಮ ಸೇರಿದಂತೆ ಎಲ್ಲಾ ಆಯ್ಕೆಗಳನ್ನು ಮುಕ್ತವಾಗಿಟ್ಟಿದ್ದಾರೆ. ಆದರೆ ರಾಜತಾಂತ್ರಿಕತೆ ಅವರ ಮೊದಲ ಆಯ್ಕೆಯಾಗಿ ಉಳಿದಿದೆ ಎಂದು ಶ್ವೇತಭವನ ಹೇಳಿದೆ. ಟ್ರಂಪ್ ಗುರುವಾರ ವೆನೆಜುವೆಲಾದ ವಿರೋಧ ಪಕ್ಷದ ನಾಯಕಿ ಮಾರಿಯಾ ಕೊರಿನಾ ಮಚಾದೊ ಅವರನ್ನು ಭೇಟಿಯಾಗಲಿದ್ದಾರೆ ಎಂದು ಅಮೆರಿಕದ ಪತ್ರಿಕಾ ಕಾರ್ಯದರ್ಶಿ ಕ್ಯಾರೋಲಿನ್ ಲೀವಿಟ್ ದೃಢಪಡಿಸಿದರು.

<><><><>

ಭದ್ರತೆಯನ್ನು ಬಲಪಡಿಸುವ ಮತ್ತು ವಲಸೆ ಕಾನೂನುಗಳನ್ನು ಜಾರಿಗೊಳಿಸುವ ಪ್ರಯತ್ನಗಳ ಭಾಗವಾಗಿ ಒಂದು ಲಕ್ಷಕ್ಕೂ ಹೆಚ್ಚು ವೀಸಾಗಳನ್ನು ರದ್ದುಪಡಿಸಲಾಗಿದೆ ಎಂದು ಅಮೇರಿಕಾ ವಿದೇಶಾಂಗ ಇಲಾಖೆ ತಿಳಿಸಿದೆ. ಇದರಲ್ಲಿ ಸುಮಾರು ೮ ಸಾವಿರ ವಿದ್ಯಾರ್ಥಿ ವೀಸಾಗಳು ಮತ್ತು

ಅಪರಾಧ ಚಟುವಟಿಕೆಗಳಿಗಾಗಿ ಕಾನೂನು ಜಾರಿ ಸಂಸ್ಥೆಗಳೊಂದಿಗೆ ಮುಖಾಮುಖಿಯಾದ ಜನರಿಗೆ ನೀಡಲಾದ ೨ ಸಾವಿರದ ೫೦೦ ವಿಶೇಷ ವೀಸಾಗಳು ಸೇರಿವೆ.

ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ, ರಾಷ್ಟ್ರೀಯ ಭದ್ರತೆಯನ್ನು ರಕ್ಷಿಸಲು ವೀಸಾ ರದ್ದತಿ ಮತ್ತು ಗಡೀಪಾರುಗಳನ್ನು ಬಳಸಲಾಗುತ್ತಿದೆ ಎಂದು ಇಲಾಖೆ ಹೇಳಿದೆ. ವೀಸಾ ಹೊಂದಿರುವವರು ಅಮೇರಿಕಾದ ಕಾನೂನುಗಳನ್ನು ಪಾಲಿಸಬೇಕು ಇಲ್ಲದಿದ್ದರೆ, ವೀಸಾಗಳನ್ನು ಕಳೆದುಕೊಂಡು ಗಡೀಪಾರು ಆಗುವ ಅಪಾಯವಿದೆ ಎಂದು ಇಲಾಖೆ ಎಚ್ಚರಿಸಿದೆ. ಇತ್ತೀಚೆಗೆ, ಭಾರತದಲ್ಲಿನ ಯುಎಸ್ ರಾಯಭಾರ ಕಚೇರಿಯು, ವೀಸಾ ಹೊಂದಿರುವವರಿಗೆ, ವಿಶೇಷವಾಗಿ ವಿದ್ಯಾರ್ಥಿಗಳಿಗೆ, ಅಮೇರಿಕಾದ ಕಾನೂನುಗಳನ್ನು ಉಲ್ಲಂಘಿಸುವುದು ಗಂಭೀರ ಪರಿಣಾಮಗಳನ್ನು ಉಂಟುಮಾಡಬಹುದು, ಇದು ವೀಸಾ ರದ್ದತಿಗೆ ಮತ್ತು ಗಡೀಪಾರು ಮಾಡಲು ಕಾರಣವಾಗಬಹುದು ಎಂದು ಎಚ್ಚರಿಸಿದೆ.

<><><>

ಪಶ್ಚಿಮ ಬಂಗಾಳದಲ್ಲಿ ಎರಡು ಶಂಕಿತ ನಿಫಾ ವೈರಸ್ ಪ್ರಕರಣಗಳು ಪತ್ತೆಯಾದ ನಂತರ ಪರಿಣಾಮಕಾರಿ ನಿಯಂತ್ರಣಕ್ಕಾಗಿ ರಾಜ್ಯಕ್ಕೆ ಸಹಾಯ ಮಾಡಲು ಕೇಂದ್ರ ರಾಷ್ಟ್ರೀಯ ಜಂಟಿ ಸ್ಫೋಟ ಪ್ರತಿಕ್ರಿಯಾ ತಂಡವನ್ನು ನಿಯೋಜಿಸಿದೆ.  ಈ ಶಂಕಿತ ಪ್ರಕರಣಗಳನ್ನು ಕಳೆದ ಭಾನುವಾರ ಕಲ್ಯಾಣಿಯಲ್ಲಿರುವ ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿಯ ವೈರಸ್ ಸಂಶೋಧನೆ ಮತ್ತು ರೋಗನಿರ್ಣಯ ಪ್ರಯೋಗಾಲಯದಲ್ಲಿ ಗುರುತಿಸಲಾಗಿದೆ. ಈ ನಡುವೆ ಪಶ್ಚಿಮ ಬಂಗಾಳ ಸರ್ಕಾರ ನಿಫಾ ವೈರಸ್ ಹರಡುವುದನ್ನು ತಡೆಯಲು ಸಮಗ್ರ ಮುನ್ನೆಚ್ಚರಿಕೆ ಕ್ರಮಗಳನ್ನು ಜಾರಿಗೆ ತಂದಿದೆ. ಮುಖ್ಯ ಕಾರ್ಯದರ್ಶಿ ನಂದಿನಿ ಚಕ್ರವರ್ತಿ, ನಬನ್ನಾದಲ್ಲಿ ಆರೋಗ್ಯ ಕಾರ್ಯದರ್ಶಿ ನಾರಾಯಣ್ ಸ್ವರೂಪ್ ನಿಗಮ್ ಮತ್ತು ಇತರ ಹಿರಿಯ ಅಧಿಕಾರಿಗಳೊಂದಿಗೆ ಪರಿಸ್ಥಿತಿಯನ್ನು ಪರಿಶೀಲಿಸಲು ತುರ್ತು ಸಭೆ ಕರೆದಿದ್ದರು.

<><><>

ಸುಗ್ಗಿಯ ಹಬ್ಬ ಲೋಹ್ರಿಯನ್ನು ಇಂದು ಆಚರಿಸಲಾಗುತ್ತಿದೆ. ಪ್ರಮುಖವಾಗಿ ಪಂಜಾಬ್, ಹರಿಯಾಣ, ಹಿಮಾಚಲ ಪ್ರದೇಶ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಕೃಷಿಕರು ಈ ಹಬ್ಬವನ್ನು ಸಡಗರ-ಸಂಭ್ರಮಗಳಿಂದ ಆಚರಿಸುತ್ತಾರೆ.  ಈ ಹಬ್ಬ, ಕೊಯ್ಲಿಗೆ ಬಂದ ಬೆಳೆಗಳ ಬಗ್ಗೆ ಸಂತೋಷ ಮತ್ತು

ಸೂರ್ಯನ ಉತ್ತರಾಭಿಮುಖ ಪ್ರಯಾಣದೊಂದಿಗೆ ಬೆಸೆದುಕೊಂಡಿದೆ. ಜನರು ಇಂದು ಸಂಜೆ ದೀಪಗಳನ್ನು ಬೆಳಗಿಸಿ, ಸಾಂಪ್ರದಾಯಿಕ ಹಾಡುಗಳನ್ನು ಹಾಡುತ್ತಾರೆ. ಕುಟುಂಬದ ಸದಸ್ಯರು ಮತ್ತು ಬಂಧುಗಳೊಂದಿಗೆ ಶುಭಾಶಯ ವಿನಿಮಯ ಮಾಡಿಕೊಳ್ಳುತ್ತಾರೆ. ಈ ಹಬ್ಬ, ಪರಸ್ಪರ ಪ್ರೀತಿ ಮತ್ತು ಏಕತೆಯ ಸಂದೇಶವನ್ನು ನೀಡುತ್ತದೆ.

<><><><>

ನವದೆಹಲಿಯ ಕರ್ತವ್ಯ ಪಥದಲ್ಲಿ ನಡೆಯಲಿರುವ ೨೦೨೬ ರ ಗಣರಾಜ್ಯೋತ್ಸವದ ಪರೇಡ್‌ಗೆ ಉಚಿತ ಪಾಸ್‌ಗಳನ್ನು ರಕ್ಷಣಾ ಸಚಿವಾಲಯ ಘೋಷಿಸಿದೆ. ಈ ಪಾಸ್‌ಗಳು ಈ ತಿಂಗಳ ೧೫ ಮತ್ತು ೧೬ ರಿಂದ ಲಭ್ಯವಿದ್ದು, ಉಚಿತವಾಗಿ ಬುಕ್ ಮಾಡಬಹುದಾಗಿದೆ. ಈ ವರ್ಷದ ಗಣರಾಜ್ಯೋತ್ಸವ ಪರೇಡ್‌ನ ಪೂರ್ವಾಭ್ಯಾಸ ಈ ತಿಂಗಳ ೨೩ ರಂದು ನಡೆಯಲಿದೆ. ಪಾಸ್‌ಗಳನ್ನು www.aamantran.mod.gov.in ವೆಬ್‌ಸೈಟ್ ಮೂಲಕ ಅಥವಾ ಆಮಂತ್ರಣ ಮೊಬೈಲ್ ಅಪ್ಲಿಕೇಶನ್ ಮೂಲಕ ಬುಕ್ ಮಾಡಬಹುದು ಎಂದು ಸಚಿವಾಲಯ ತಿಳಿಸಿದೆ.

<><><><>

ಇಂಡಿಯಾ ಓಪನ್ ಬ್ಯಾಡ್ಮಿಂಟನ್ - ೨೦೨೬ ಟೂರ್ನಮೆಂಟ್ ಇಂದು ನವದೆಹಲಿಯ ಇಂದಿರಾ ಗಾಂಧಿ ಒಳಾಂಗಣ ಕ್ರೀಡಾಂಗಣದಲ್ಲಿ ಆರಂಭವಾಗಲಿದೆ. ಎರಡು ಬಾರಿ ಒಲಿಂಪಿಕ್ ಪದಕ ವಿಜೇತೆ ಪಿವಿ ಸಿಂಧು, ಸ್ಪರ್ಧೆಯಲ್ಲಿ ಭಾರತದ ಸವಾಲನ್ನು ಮುನ್ನಡೆಸಲಿದ್ದಾರೆ. ಮಾಳವಿಕಾ ಬನ್ಸೋಡ್ ಮತ್ತು ಯುವ ತನ್ವಿ ಶರ್ಮಾ, ಮಹಿಳೆಯರ ಸಿಂಗಲ್ಸ್‌ನಲ್ಲಿ ಭಾರತವನ್ನು ಪ್ರತಿನಿಧಿಸಲಿದ್ದಾರೆ. ಮಹಿಳಾ ಡಬಲ್ಸ್‌ನಲ್ಲಿ, ಟ್ರೀಸಾ ಜಾಲಿ ಮತ್ತು ಗಾಯತ್ರಿ ಗೋಪಿಚಂದ್, ಭಾರತೀಯ ಸವಾಲನ್ನು ಮುನ್ನಡೆಸಲಿದ್ದಾರೆ. ಪುರುಷರ ಸಿಂಗಲ್ಸ್‌ನಲ್ಲಿ, ಲಕ್ಷ್ಯ ಸೇನ್ ಮತ್ತು ಆಯುಷ್ ಶೆಟ್ಟಿ ಆರಂಭಿಕ ಸುತ್ತಿನಲ್ಲಿ ಪರಸ್ಪರ ಎದುರಾಗಲಿದ್ದು, ಒಬ್ಬರು ಮಾತ್ರ ಮುನ್ನಡೆಯುತ್ತಾರೆ. ಮಾಜಿ ವಿಶ್ವ ಚಾಂಪಿಯನ್‌ಶಿಪ್ ಪದಕ ವಿಜೇತರಾದ ಕಿಡಂಬಿ ಶ್ರೀಕಾಂತ್ ಮತ್ತು ಎಚ್‌ಎಸ್ ಪ್ರಣೋಯ್ ಕೂಡ ಕಣದಲ್ಲಿದ್ದಾರೆ. ಪುರುಷರ ಡಬಲ್ಸ್‌ನಲ್ಲಿ, ವಿಶ್ವದ ನಂ. ೩ ಜೋಡಿ ಸಾತ್ವಿಕ್‌ಸಾಯಿರಾಜ್ ರಾಂಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಪ್ರಶಸ್ತಿಯನ್ನು ತಮ್ಮದಾಗಿಸಿಕೊಳ್ಳುವ ಗುರಿ ಹೊಂದಿದ್ದಾರೆ, ಎಂಆರ್ ಅರ್ಜುನ್ ಮತ್ತು ಹರಿಹರನ್ ಅಂಶಕರುಣನ್ ಕೂಡ ಸ್ಪರ್ಧಿಸಲಿದ್ದಾರೆ. ಮಿಶ್ರ ಡಬಲ್ಸ್‌ನಲ್ಲಿ, ತನಿಶಾ ಕ್ರಾಸ್ಟೊ ಮತ್ತು ಧ್ರುವ್ ಕಪಿಲಾ ಭಾರತದ ಅಗ್ರ ಜೋಡಿಯಾಗಲಿದ್ದಾರೆ.